# ಸಾಮಾಜಿಕ ಸಮಾನತೆಯಲ್ಲಿ ಬಸವೇಶ್ವರರ ಚಿಂತನೆ

**ಟಿಪ್ಪಣ್ಣ ಧ ಡಂಗಿ**
ಉಪನ್ಯಾಸಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪದವಿ ಮಹಾವಿದ್ಯಾಲಯ, ಮಹಾಲಿಂಗಪುರ.

DOI: https://doi.org/10.5281/zenodo.17297237

## ABSTRACT:

ಜನಸಾಮಾನ್ಯರ ಆಡು ಮಾತಿನಲ್ಲಿ ರಚಿಸಿದ ವಚನಗಳ ಮೂಲಕ ಸಾಮಾಜಿಕ ಬದಲಾವಣೆಯ ಕಹಳೆ ಮೊಳಗಿಸಿದ ಬಸವಣ್ಣ ಬಾಲ್ಯದಿಂದಲೇ ಅವರ ಚಿಂತನಶೀಲತೆ, ಗೊಡ್ಡು ಸಂಪ್ರದಾಯಗಳನ್ನು ಪ್ರಶ್ನಿಸುವ ಮತ್ತು ಪ್ರತಿಭಟಿಸುವ ಸ್ವಭಾವ ಎದ್ದು ಕಾಣುತ್ತಿತ್ತು. ಉದಾಹರಣೆಗೆ 8ನೇ ವಯಸ್ಸಿನಲ್ಲಿ ಹೆತ್ತವರು ಉಪನಯನ ಮಾಡಲು ಮುಂದಾದಾಗ ಬಸವಣ್ಣ ಅದನ್ನು ನಿರಾಕರಿಸಿದರು. ಅಷ್ಟೇ ಅಲ್ಲ, ಕುಟುಂಬವನ್ನೇ ತೊರೆದು ಕೂಡಲಸಂಗಮಕ್ಕೆ ನಡೆದರು. ಅಲ್ಲಿ ಜಾತವೇದ ಮುನಿಗಳ ಶಿಷ್ಯರಾಗಿ ವೇದ ಮತ್ತು ಉಪನಿಷತ್ತುಗಳ ಅಧ್ಯಯನದಲ್ಲಿ ತೊಡಗಿದರು. ಸಮತೋಲನಕ್ಕಾಗಿ ಹೋರಾಡಿದ ನೇತಾರ, ಕಲುಷಿತಗೊಂಡಿದ್ದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ಧಿಕ್ಕರಿಸಿ ಗುಣಾತ್ಮಕ ಬದಲಾವಣೆಯನ್ನು ಆರಿಸಿ ಹೊರಟ ದಾರ್ಶನಿಕರಾಗಿದ್ದಾರೆ. ಸಾಮಾಜಿಕ ಕ್ರಾಂತಿಯ ಹರಿಕಾರರೆನಿಸಿ, ತಮ್ಮದೇ ನೆಲೆಯಿಂದ ಯುಗಮಾನದ ಶಕ್ತಿಯಾಗಿ, ವಿಶ್ವಗುರು, ಭಕ್ತಿ ಭಂಡಾರಿ, ನಡೆದಾಡುವ ದೈವ, ಜಗಜ್ಯೋತಿಯಾಗಿ ನಿಂತಿರುವ ಸಾಂಸ್ಕೃತಿಕ ನಾಯಕರೆಂದರೆ ಬಸವಣ್ಣನವರು.

## KEYWORDS:

ವಚನಗಳು, ಅನುಭವ ಮಂಟಪ, ಲಿಂಗ ತಾರತಮ್ಯ, ಜಾತಿ ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಶೋಷಣೆ.

**ಪೀಠಿಕೆ :**

**“ಅರಿವಿನ ದಾರಿ ಕಾಣದೆ ಜನ ಸಮುದಾಯ ನರಳುವಾಗ**
**ಅರಿತು ದಾರಿ ತೋರುವ ಮಹಾಪುರುಷರು ಅವತರಿಸುತ್ತಾರೆ”**

12ನೇ ಶತಮಾನದಲ್ಲಿ ಜಾತಿ, ವರ್ಣ, ವರ್ಗ, ಲಿಂಗ ಬೇಧಗಳು ತಾಂಡವವಾಡುತ್ತಿದ್ದವು. ಸಾಮಾನ್ಯ ಮನುಷ್ಯನಿಗೆ ನಡುಬೀದಿಯಲ್ಲಿ ಸ್ವತಂತ್ರವಾಗಿ ನಡೆದಾಡುವ ಹಕ್ಕಿರಲಿಲ್ಲ. ದೇವಾಲಯ ಪ್ರವೇಶವಂತೂ ಕನಸಿನ ಮಾತಾಗಿತ್ತು. ಹಗಲು ನಡುಬೀದಿಯಲ್ಲಿ ಬರಬೇಕಾದರೆ ಸಂಬೋಳಿ ಎಂದು ಕೂಗುತ್ತಾ ಬರಬೇಕಾದ ಕಾಲವದು. ಆತನದು ಪ್ರಾಣಿಗಿಂತ ಕನಿಷ್ಠ ಸ್ಥಿತಿ. ಇಂತಹ ಹೀನಾಯ ಸ್ಥಿತಿಯನ್ನು ಕಂಡ ಬಸವಣ್ಣನವರು ಜಾತಿ, ವರ್ಣ, ವರ್ಗಗಳನ್ನು ತೊಡೆದುಹಾಕಿ ಸಾಮಾಜಿಕ ಸಮಾನತೆಯ ಅಡಿಪಾಯದ ಮೇಲೆ ಆದರ್ಶ ಸಮಾಜವನ್ನು ಕಟ್ಟುವ ಕನಸಿನೊಂದಿಗೆ ಕಾರ್ಯರಂಗಕ್ಕೆ ಇಳಿದಿದ್ದರು.

ಅಂದು ವರ್ಣ, ಜಾತಿ, ಲಿಂಗ ಹಾಗೂ ಸಂಪತ್ತಿನ ಕಾರಣದಿಂದ ಒಂದು ವರ್ಗದಿಂದ ಇನ್ನೊಂದು ವರ್ಗದ ಶೋಷಣೆ ಒಂದಲ್ಲ ಒಂದು ರೀತಿಯಲ್ಲಿ ನಡೆದಿತ್ತು. ಸಾಮಾಜಿಕ ನಿಯಂತ್ರಣಕ್ಕಾಗಿ ರಚಿತವಾಗಿದ್ದ ಸ್ಮೃತಿಗಳು ಬೇಧ ತತ್ವಗಳಾಗಿ ಪರಿಣಮಿಸಿ ಇಡೀ ಸಮಾಜವೇ ಹೋಳು ಹೋಳಾಗಿ ವಿಭಜಿತವಾಗಿತ್ತು. ಇದರಿಂದ ಭಾರತೀಯರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು ಎಂಬ ಪರಿಸ್ಥಿತಿ ನಿರ್ಮಾಣವಾಯಿತು.

**ಬಸವಣ್ಣನವರ ಸಾಮಾಜಿಕ ಸಮಾನತೆ:**

“ಬೆಳೆಯುವ ಸಿರಿ ಮೊಳಕೆಯಲ್ಲಿ” ಎಂಬ ಜನಪದರ ಮಾತಿನಂತೆ, ಎಳೆತನದಲ್ಲಿಯೇ ಬಸವಣ್ಣನವರು ವಿಮರ್ಶಾ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದರು. ಬಾಲ್ಯದಲ್ಲಿ ನೀಡುವ ವಿದ್ಯಾಭ್ಯಾಸವು ವೈಚಾರಿಕ ವಿಚಾರಕ್ಕೆ ಆದ್ಯತೆ ನೀಡಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಹೊಂದಿದವರು.

**ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ,**
**ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ,**
**ತನ್ನ ಬಣ್ಣಿಸಬೇಡ ಇದ ಹಳಿಯಲು ಬೇಡ,**
**ಇದೆ ಅಂತರಂಗ ಶುದ್ಧಿ ಇದೆ ಬಹಿರಂಗ ಶುದ್ಧಿ,**
**ಇದೇ ನಮ್ಮ ಕೂಡಲಸಂಗನ ಒಲಿಸುವ ಪರಿ.**

ಹೀಗೆ ಹೊಸ ಸಮಾಜ ನಿರ್ಮಾಣಕ್ಕಾಗಿ ಬಸವಣ್ಣ ಮಾಡಿದ ಮೊದಲನೇ ಕೆಲಸವೆಂದರೆ ತಮ್ಮ ಧರ್ಮ ಮಂದಿರದ ಎಲ್ಲಾ ಬಾಗಿಲುಗಳನ್ನು, ಒಳಗಿನ ಕೊಠಡಿಗಳ ಬಾಗಿಲುಗಳನ್ನು ಕೂಡ ತೆರೆದಿದ್ದು. ಅಲ್ಲಿ ಉತ್ತಮ-ಹೀನ ಎಂಬ ಕುಲಭೇದವಿಲ್ಲ, ಶ್ರೀಮಂತ-ದಾರಿದ್ರರೆಂಬ ತಾರತಮ್ಯವಿಲ್ಲ. ಅವರು ಬೋಧಿಸಿದ ಧರ್ಮ ಸ್ವರೂಪವೂ ಅಷ್ಟೇ; ಅದು ಅತ್ಯಂತ ಸರಳವಾದದ್ದು.

**ಜಾತಿ ಸಮಾನತೆ :**

ಬಸವಣ್ಣನವರಿಗೆ ಕೆಳ ವರ್ಗದವರೆಂದರೆ ಅಪಾರವಾದ ಕರುಣೆ ಮತ್ತು ವಾತ್ಸಲ್ಯ. ಅವರನ್ನು ಊರ ಹೊರಗಿಟ್ಟು ಹೊಲೆಯರೆಂದು ಕರೆದು ನಿಕೃಷ್ಟವಾಗಿ ಕಾಣುವುದು ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ. ಉತ್ತಮ ಕುಲದಲ್ಲಿ ಹುಟ್ಟಿದರು ಚಂಡಾಲರಾಗಿ ಬಾಳುತ್ತಿರುವುದನ್ನು ಅವರು ಕಂಡಿದ್ದರು. ಬೇರೆ ಬೇರೆ ವೃತ್ತಿಗಳನ್ನ ಅವಲಂಬಿಸಿರುವುದು ಅವರವರ ಜೀವನೋಪಾಯಕ್ಕೆ ಮಾತ್ರ. ವೇದಗಳನ್ನು ಅಧ್ಯಯನ ಮಾಡಿದ್ದರಿಂದ ಬ್ರಾಹ್ಮಣ, ಬಟ್ಟೆಯನ್ನು ನೆಯ್ದರಿಂದ ನೇಯ್ಗೆಯವ, ಹಾಗೆ ಕಮ್ಮಾರ, ಅಂಬಿಗ, ಹರಿಜನ ಇತ್ಯಾದಿಯವರು ಬೇರೆ ಬೇರೆ ವೃತ್ತಿಗಳನ್ನ ಅವಲಂಬಿಸಿದ್ದಾರೆ. ಇವರೆಲ್ಲರೂ ಮನುಷ್ಯರೇ, ಇವರಲ್ಲಿ ಮೇಲು-ಕೀಳುಗಳನ್ನು ಹುಡುಕುವುದು ಮೂರ್ಖತನ. ಹಾಗಾದರೆ ಲೋಕದಲ್ಲಿ ಹೊಲೆಯರಿಲ್ಲವೇ? ಇದ್ದಾರೆ ಎಂದಿದ್ದಾರೆ ಬಸವಣ್ಣನವರು.

**ಕೊಲ್ಲುವನೆ ಮಾದಿಗ, ಹೊಲಸು ತಿಂಬುವನೇ ಹೊಲೆಯ!**
**ಕುಲವೇನು ಅವಂದಿರ ಕುಲವೇನು?**
**ಸಕಲ ಜೀವಾತ್ಮರಿಗೆ ಲೇಸನ್ನ ಬಯಸುವ**
**ನಮ್ಮ ಕೂಡಲಸಂಗನ ಶರಣರೇ ಕುಲಜನರು.**

ಹೀಗೆ ಹುಟ್ಟಿದ ಮನುಷ್ಯರೆಲ್ಲರೂ ಜಾತಿ, ಮತ, ಪಂಥಗಳ ಭೇದವಿಲ್ಲದೆ ಸಮಾನರೆಂದು ಅವರು ಬೋಧಿಸಿದರು. “ಶೆಟ್ಟಿ ಎಂದೆನೆಂಬೆನೆ ಸಿರಿಯಾಳನ? ಮಡಿವಾಳನೆಂದೆನೆಂಬೆನೆ ಮಾಚಯ್ಯನ? ಡೋಹಾರನೆಂಬೆನೆ ಕಕ್ಕಯ್ಯನ? ನಾನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯ” ಎಂದು ಹೇಳುವುದರ ಮೂಲಕ ದೈವ ಸೃಷ್ಟಿಯಲ್ಲಿ ಎಲ್ಲರೂ ಒಂದೇ, ಜಾತಿ ಹೆಸರಲ್ಲಿ ನಾವು ಮಾಡುವ ತಾರತಮ್ಯ ದೇವರಿಗೂ ಪ್ರಿಯವಾಗದು ಎಂದು ತಿಳಿಸಿಕೊಟ್ಟಿದ್ದಾರೆ. ಅದನ್ನು ಹೋಗಲಾಡಿಸಲು ಸಹಭೋಜನ, ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಿಸಿದರು. ಬ್ರಾಹ್ಮಣ ಶರಣ ಮಧುವರಸನ ಮಗಳಿಗೂ ಹರಿಜನ ಹರಳಯ್ಯನ ಮಗನಿಗೂ ವಿವಾಹ ಮಾಡಿಸಿದರು. ಅವರಿಬ್ಬರು ಶಿವಭಕ್ತರಾದರು.

**ಸ್ತ್ರೀ ಸಮಾನತೆ:**

ಪುರುಷರ ಶ್ರೇಷ್ಠತೆ, ಸ್ತ್ರೀಯ ಹೀನತೆ ಇದು ಒಪ್ಪಿಕೊಂಡ ಬಂದ ಸಾಮಾಜಿಕ ತತ್ವವಾಗಿತ್ತು. "ಸ್ತ್ರೀಯರು ಸ್ವತಂತ್ರಕ್ಕೆ ಅರ್ಹರಲ್ಲ" ಎಂಬ ವಾದವು ಕೇಳಿ ಬರುತ್ತಿತ್ತು. ಇಂತಹ ಹಿನ್ನೆಲೆಯಲ್ಲಿ ಬಸವೇಶ್ವರರು ಸ್ತ್ರೀ ಪುರುಷ ಸಮಾನತೆಯ ಘೋಷಣೆಯನ್ನ ಮೊಳಗಿಸಿದ್ದು ಕ್ರಾಂತಿಕಾರಕ ಪ್ರಯತ್ನವಾಗಿತ್ತು. ಇಂತಹ ಸಮಯದಲ್ಲಿ ಬಸವಣ್ಣನವರು ಮತ್ತು ವಚನಕಾರರು ಪುರುಷ ಪ್ರಾಬಲ್ಯದ ಭಾವನೆಗಳನ್ನು ಪ್ರತಿಭಟಿಸಿ, ಸ್ತ್ರೀಯರಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಸಂಸ್ಥಾಪಿಸಲು ತಮ್ಮದೇ ರೀತಿಯಲ್ಲಿ ಪ್ರಯತ್ನಿಸಿದರು. ಸ್ತ್ರೀ ಮಾಯೆಯಲ್ಲ, ಸ್ತ್ರೀ ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಸಿದ್ದರಾಮ ಸಾರಿದ. ಅಲ್ಲಮಪ್ರಭುಗಳು ಹೊನ್ನು, ಹೆಣ್ಣು, ಮಣ್ಣು, ಮಾಯವಲ್ಲ, ಮನದ ಮಂದಣ ಆಸೆ ಮಾಯ ಕಾಣ ಎಂದರು. ಅನೇಕ ವಚನಕಾರರಿಗೆ ಮೂಲತಃ ಹೆಣ್ಣು-ಗಂಡು ಎಂಬ ಭೇದವೇ ತಪ್ಪು ಎನಿಸಿದೆ. ಅವರಿಗಿರುವ ವ್ಯತ್ಯಾಸ ಬಾಹ್ಯ ಆಕಾರದ ಹೊರತು, ಸ್ವರೂಪ ಸಂಬಂಧಿ ಆದುದಲ್ಲ. ಇದನ್ನು ಮೊದಲು ಗುರುತಿಸಿದಾತ ಜೇಡರ ದಾಸಿಮಯ್ಯ.

**ಮೊಲೆ ಮೂಡಿ ಬಂದರೆ ಹೆಣ್ಣೆಂಬರು.**
**ಗಡ್ಡ ಮೀಸೆ ಬಂದರೆ ಗಂಡೆಂಬರು.**
**ನಡುವೆ ಸುಳಿವ ಆತ್ಮನು**
**ಗಂಡು ಅಲ್ಲ ಹೆಣ್ಣು ಅಲ್ಲ ಕಾಣ ರಾಮನಾಥ.**

ಹೆಣ್ಣು-ಗಂಡು ಎನ್ನುವ ಕಲ್ಪನೆ ಕೇವಲ ದೇಹಕ್ಕೆ ಮಾತ್ರವೇ ವಿನಃ ಆತ್ಮಕ್ಕೆ ಅಲ್ಲ ಎಂಬ ವಿಶಿಷ್ಟ ಕಲ್ಪನೆ ನೀಡಿದ ಹಿರಿಮೆ ಬಸವಾದಿ ಶರಣರಿಗೆ ಸಲ್ಲುತ್ತದೆ. ಬಸವೇಶ್ವರರು ಸ್ತ್ರೀಯರಿಗೂ ಪುರುಷರಂತೆ ಲಿಂಗ ಧರಿಸುವ ಮತ್ತು ಶಿವರಾಧನೆ ಮಾಡುವ ಹಕ್ಕು ನೀಡಿದರು. ವಿಧವಾ ಪುನರ್ವಿವಾಹಕ್ಕೆ ಅವಕಾಶ ನೀಡಿದರು. ಸ್ತ್ರೀಯರು ಪುರುಷರಂತೆ ಧಾರ್ಮಿಕ ವಿಚಾರಗಳಲ್ಲಿ ಮುಕ್ತ ಚರ್ಚೆ ನಡೆಸಲು ಅವಕಾಶ ಕಲ್ಪಿಸಲಾಯಿತು. ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳಿಗೆ ನೀಡುತ್ತಿದ್ದಷ್ಟೇ ಪ್ರಾಮುಖ್ಯತೆಯನ್ನು ಅಕ್ಕಮಹಾದೇವಿಗೆ ನೀಡಲಾಗುತ್ತಿತ್ತು.

**ಕಾಯಕ ಅಥವಾ ವೃತ್ತಿ ಸಮಾನತೆ :**

"ಹಚ್ಚುವುದಾದರೆ ದೀಪವನ್ನೇ ಹಚ್ಚು ಬೆಂಕಿಯನಲ್ಲ, ಆರಿಸುವುದಾದರೆ ನೋವನ್ನು ಆರಿಸು ನಗುವನಲ್ಲ" ಎಂಬ ದ.ರಾ. ಬೇಂದ್ರೆಯವರ ನುಡಿಸಾರಕ್ಕೆ ಸಂಪೂರ್ಣವಾಗಿ ಹೋಲಿಕೆಯಾಗುವ ಬಸವಣ್ಣನವರ ಕಾಯಕ ಜೀವನ ಆದರ್ಶ ಎಂದೆಂದೂ ಚಿರವಾಗುವಂತದ್ದು. ಅಲ್ಲದೆ ಅದೇ ಅನುಸರಣೆಯಾದಂತಹ 12ನೇ ಶತಮಾನದ ಶುಭಾಶಯಗಳು ಬೋಧಿಸಿದ ಮತ್ತೊಂದು ಕ್ರಾಂತಿಕಾರಕ ತತ್ವ. ಈ ತತ್ವದ ಮೂಲಕ ಬಸವಣ್ಣನವರು ಸಮಾಜದ ಸಮಾನತೆಗೆ ಹೋರಾಡಿದರು. ಕಾಯಕ ತತ್ವದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಬೋಧಿಸಿದ ಪ್ರಪ್ರಥಮ ವ್ಯಕ್ತಿ ಬಸವೇಶ್ವರರಾಗಿದ್ದಾರೆ. "ಕಾಯಕವೇ ಕೈಲಾಸ" ಎಂಬ ಮಂತ್ರದ ಮೂಲಕ ಕಾಯಕದ ಶ್ರೇಷ್ಠತೆಯನ್ನು ಮನಗಾಣಿಸಿದವರು. ದಾಸೋಹದ ಪರಿಕಲ್ಪನೆಯನ್ನು ಪ್ರಬಲವಾಗಿ ಪ್ರತಿಪಾದಿಸಿದವರು. ಇದರ ಅನುಸಾರ ಶ್ರಮಪಟ್ಟು ಗಳಿಸಿದ ಸಂಪತ್ತು ತನ್ನೊಬ್ಬನಿಗಾಗಿ ಅಲ್ಲ; ಅದು ಸಮಾಜದ ಒಳಿತಿಗಾಗಿ ಬಳಕೆಯಾಗ ತಕ್ಕದ್ದು. ಅದಕ್ಕಾಗಿ, ಅನ್ನ ದಾಸೋಹ, ಜ್ಞಾನ ದಾಸೋಹ, ಕಾಯಕ ದಾಸೋಹ – ಈ ಮೂರು ವಿಧದ ದಾಸೋಹ ನಡೆಸಬೇಕೆಂದು ಆಗ್ರಹಿಸಿದವರು.

ಬಸವಣ್ಣನವರು ಮತ್ತು ಶಿವಶರಣರು ಕಾಯಕ ಎಂಬ ಪದವನ್ನು ವಿಶಾಲ

ಅರ್ಥದಲ್ಲಿ ಬಳಸಿದ್ದಾರೆ. ಶರೀರ ಶ್ರಮ ಮಾಡಿ ಗಳಿಸಿದರಲ್ಲಿ ಜೀವನ ನಿರ್ವಹಣೆಗೆ ಬೇಕಾದಷ್ಟನ್ನು ಮಾತ್ರ ಬಳಸಿ, ಉಳಿದಿದ್ದನ್ನು ಸಮಾಜ ಸೇವೆಗಾಗಿ ಅಥವಾ ದಾಸೋಹಕ್ಕಾಗಿ ಬಳಸುವುದು ಇದೇ ಬಸವೇಶ್ವರರ ಕಾಯಕ ತತ್ವದ ತಿರುಳು. ಜಗ ಬೆಳಗುವ ವೃತ್ತಿ, ತ್ರಿವಿಧ ದಾಸೋಹ ಎಂಬ ಹಣತೆಯಲ್ಲಿ ಭಕ್ತಿ ಎಂಬ ತೈಲವೆರೆದು, ಕಾಯಕವೆಂಬ ಬತ್ತಿ ಇಟ್ಟು, ಪರಿಶ್ರಮವೆಂಬ ಜ್ಯೋತಿ ಹಚ್ಚಿ ಕೈಲಾಸವನ್ನು ನಿರ್ಮಿಸಿ ಬಸವಣ್ಣನವರು ಜಗಜ್ಯೋತಿಯಾದರು. ಸ್ತ್ರೀಯರು ಪುರುಷರಂತೆ ಧಾರ್ಮಿಕ ವಿಚಾರಗಳಲ್ಲಿ ಮುಕ್ತ ಚರ್ಚೆ ನಡೆಸಲು ಅವಕಾಶ ಕಲ್ಪಿಸಲಾಯಿತು. ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳಿಗೆ ನೀಡಿದ್ದಷ್ಟೇ ಪ್ರಾಮುಖ್ಯವನ್ನು ಅಕ್ಕಮಹಾದೇವಿಗೆ ನೀಡಲಾಗಿತ್ತು. ಕಾಶಿ ಕಮ್ಮಾರನಾದ, ಬಿಸಿ ಮಡಿವಾಳನಾದ, ಹಾಸನಕ್ಕೆ ಸಾಲಿಗನಾದ, ವೇದವನೋದಿ ಬ್ರಾಹ್ಮಣನಾದ. ಇವರೆಲ್ಲ ತಮ್ಮ ಸಾಮಾಜಿಕ ಜೀವನಕ್ಕೆ ಅಗತ್ಯ ನೀಡಿದರು.

ಯಾವ ಕಾಯಕ ಮೇಲಲ್ಲ, ಯಾವುದು ಕೀಳಲ್ಲ. ನ್ಯಾಯ ಮಾರ್ಗದಿಂದ ಹಾಗೂ ಶರೀರ ಶ್ರಮದಿಂದ ಮಾಡುವ ಎಲ್ಲಾ ಕಾಯಕಗಳು ಸಮಾನ, ಎಲ್ಲವೂ ಪವಿತ್ರ ಎಂದು ಬಸವಣ್ಣ ಹೇಳಿದ್ದಾರೆ. ಚೆನ್ನಯ್ಯ ಕಾಯಕದಿಂದ ಮಾದರ, ಮಾಚಯ್ಯನು ಕಾಯಕದಿಂದ ಮಡಿವಾಳ, ಕಕ್ಕಯ್ಯನು ಡೋಹಾರ. ಇವರೆಲ್ಲರೂ ಪರಮಶಿವ ಭಕ್ತರು. ಇವರು ಮಾಡುವ ಕಾಯಕ ಹೀನ ಹೇಗಾದೀತು? ಕಾಯಕ ಬೇರೆ ಬೇರೆಯಾದರೂ ಇವರೆಲ್ಲರೂ ಕೂಡಲಸಂಗಮನಿಗೆ ಪ್ರಿಯರಾದ ಭಕ್ತರು. ಇವರ ಕಾಯಕಗಳೆಲ್ಲ ಸಮಾನವಾಗಿ ಪವಿತ್ರವಾದವು ಎಂಬುದು ಅವರ ವಿಚಾರವಾಗಿತ್ತು.

**ಅನುಭವ ಮಂಟಪ :**

ಶರಣರು ಸ್ಥಾಪಿಸಿದ ಅನುಭವ ಮಂಟಪ ಎಂಬ ವಿಶ್ವದ ಪ್ರಥಮ ಸಾಮಾಜಿಕ–ಧಾರ್ಮಿಕ ಸಂಸತ್ತಿನಲ್ಲಿ ಎಲ್ಲರಿಗೂ ಮುಕ್ತ ಪ್ರವೇಶ ಮತ್ತು ಅನುಭವ ಹಂಚಿಕೊಳ್ಳುವ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಅಡುಗೆ ಮನೆಗೆ ಸೀಮಿತಗೊಂಡಿದ್ದ ಮಹಿಳೆಯರು ಅನುಭವ ಮಂಟಪಕ್ಕೆ ಬಂದು ವಚನ ರಚನೆಯ ಮಟ್ಟಕ್ಕೆ ಏರಿದರು. ಸ್ತ್ರೀಯರಿಗೂ ಸ್ವತಂತ್ರ ತಂದುಕೊಟ್ಟ ಮಹಾ ಕಾರಣಿಕ ಬಸವಣ್ಣ. ಬಸವಣ್ಣನವರ ವಿಚಾರ ತತ್ವಗಳಿಗೆ ಪ್ರಭಾವಿತರಾಗಿ ಕಾಶ್ಮೀರದಿಂದ ದೊರೆ ಭೂಪಾಲ, ರಾಜಕುಮಾರಿ ಬೊಂತಾದೇವಿ, ಅಫ್ಘಾನಿಸ್ತಾನದ ಮರಳ ಶಂಕರ ದೇವರು, ಆಂಧ್ರಪ್ರದೇಶದ ಕಿನ್ನರಿ ಬೊಮ್ಮಯ್ಯ, ತಮಿಳುನಾಡಿನ ಮೇದಾರ ಚೆನ್ನಯ್ಯ ಮುಂತಾದವರು ದೇಶದ ಮೂಲೆ ಮೂಲೆಯಿಂದ ಕಲ್ಯಾಣಕ್ಕೆ ಬಂದಿದ್ದರು. ಬಸವಣ್ಣನವರ ನೇತೃತ್ವದಲ್ಲಿ ಶರಣಪಡೆ ನಿರ್ಮಾಣಗೊಂಡಿತ್ತು. ಅಷ್ಟೊಂದು ಹೆಚ್ಚಿನ ಜನಸಂಖ್ಯೆಯಲ್ಲಿ ಅನುಭವಿಗಳು ಏಕಕಾಲಕ್ಕೆ ಒಂದೆಡೆ ಸೇರಿದ್ದು ಐತಿಹಾಸಿಕ ದಾಖಲೆ. ಬಸವಣ್ಣನವರದು ಇದೊಂದು ವಿಚಾರ ಕ್ರಾಂತಿಯಾಗಿ ವಿಚಾರದಿಂದ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂಬುದು ಶರಣ ಸಂಸ್ಕೃತಿಯ ಮೂಲ ಸೂತ್ರವಾಗಿದೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳಿಗೆ ಹಾಗೂ ಭಾರತ ಸಂವಿಧಾನದಲ್ಲಿ ಉಲ್ಲೇಖಿಸಿರುವ ಸಮಾಜವಾದ, ಜಾತ್ಯತೀತ ತತ್ವಗಳಿಗೆ ಶರಣ ವಚನ ಸಂವಿಧಾನ ಅಡಿಪಾಯವಾಗಿದೆ. ಅನುಭವ ಮಂಟಪದಲ್ಲಿ ಅಸ್ಪೃಶ್ಯರ ಸಮಾನತೆಗಾಗಿ ಬಸವಣ್ಣನವರು ವೈಚಾರಿಕ ಕ್ರಾಂತಿಯನ್ನೇ ಮೊಳಕಿಸಿದರು. ಬಸವಣ್ಣನವರ ಪ್ರಗತಿಪರ ವಿಚಾರಗಳು ಕಲ್ಯಾಣದ ಅಭಿವೃದ್ಧಿಗೆ ಅಡಿಪಾಯ ಹಾಕಿದವು. ಇಂದು ನಡೆಯುವ ಸಂಸತ್ತಿನ ಕಲಾಪದಂತಲ್ಲದೆ ಪ್ರತಿನಿತ್ಯ ಕಾಯಕ ಮಾಡಿ, ಬಂದ ಪ್ರತಿಫಲದಿಂದ ಶರಣರಿಗೆ ದಾಸೋಹವನ್ನು ಬಡಿಸಿ ಅಸಮಾನತೆ, ಅಂಧಕಾರ, ಮೂಢನಂಬಿಕೆ, ಇವೇ ಮುಂತಾದ ಸಮಾಜಕ್ಕೆ ಕಂಟಕವಾದ ವಿಷಯಗಳನ್ನು ಸರಿಪಡಿಸುವ ಆರೋಗ್ಯದಾಯಕ ಚರ್ಚೆಗಳು

ಪ್ರತಿನಿತ್ಯ ಅಲ್ಲಿ ನಡೆಯುತ್ತಿದ್ದವು. ಈ ಕಾಯಕವು ಇಂದಿನ ಅಭಿವೃದ್ಧಿ ಹೊಂದಿರುವ ದೇಶಗಳ ಸಂಸತ್ತುಗಳಲ್ಲಿ ನಡೆಯುವ ಚರ್ಚೆಯನ್ನು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುತ್ತದೆ. ಅದು ಇಂದಿನ ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಸತ್ತಿನ ಕಾಯಕಗಳಿಗೂ ಮೇಲಾದ ಸಾಧನೆಯನ್ನು ಮಾಡಿದೆ ಎಂದರೆ ತಪ್ಪಾಗಲಾರದು.

"ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ಬಸವಣ್ಣನವರ ನಂಬಿಕೆ:

ಅಹಂಕಾರವು ಅಯೋಗ್ಯವಾದದ್ದು, ಅದು ಸುತ್ತಲೂ ವೈರಿಗಳನ್ನು ನಿರ್ಮಿಸುತ್ತದೆ. ವಿನಯಶೀಲತೆಯು ದೇವಸ್ಥಾನ ನಿರ್ಮಿಸುತ್ತದೆ ಎಂದು ಹೇಳಿದರು. ಅದಕ್ಕೆ "ಅಯ್ಯೋ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" ಎನ್ನುತ್ತಿದ್ದರೆ ನಿತ್ಯ ವ್ಯವಹಾರದ ಜೀವನ ಶೈಲಿಯನ್ನು ಅಂದವಾಗಿ ಒಂದೇ ವಾಕ್ಯದಲ್ಲಿ ತಿಳಿಸಿ ತಾವು ಆಚರಿಸಿದವರು. ಶರಣ ಮಾದಿಗ ಹರಳಯ್ಯ ದಂಪತಿಗಳು ತಮ್ಮ ತೊಡೆಯ ಚರ್ಮದಿಂದ ಬಸವಣ್ಣನವರ ಕಾಲಿಗೆ ಪಾದರಕ್ಷೆ ಮಾಡಿ ತಂದುಕೊಟ್ಟವು. ಅವುಗಳನ್ನು ಅಣ್ಣನವರು ತಲೆಯ ಮೇಲೆ ಇಟ್ಟುಕೊಂಡು ನರ್ತಿಸಿದರೆಂದು, ಅವುಗಳನ್ನು ನಂತರ ಪೂಜಿಸಿದರೆಂದು ತಿಳಿದು ಬರುತ್ತದೆ. ಸಿರಿವಂತರು ಸೊಕ್ಕಿನವರು, ಅವರು ಮಾತಾಡುವುದಿಲ್ಲ, ಬಡವರನ್ನು ಮಾತಾಡಿಸಿದರೆ ತಡವಿಲ್ಲದೆ ಮಾತನಾಡುವವರು ಎಂದು ಹೇಳಿ ಆ ಕಾಲದಲ್ಲಿಯೂ ಶ್ರೀಮಂತಿಕೆಗೆ ಸೊಕ್ಕೇ ಪ್ರತೀಕವಾಗಿತ್ತೆಂದು ಹೇಳುತ್ತಾರೆ. "ಉಳ್ಳವರು ಶಿವಾಲಯ ಮಾಡುವರಯ್ಯ, ನಾನೇನು ಮಾಡಲಿ? ಬಡವನಯ್ಯ.. ಕಾಲೇ ಕಂಬ, ದೇಹವೇ ದೇಗುಲ.." ಎಂಬಿತ್ಯಾದಿ ವಚನಗಳೊಂದಿಗೆ "ವಿದ್ಯಾವಿನಯೇನ ಶೋಭಿತೆ" ಎಂಬಂತೆ, ವಿದ್ಯೆಗೆ ವಿನಯವೇ ಮಾಣಿಕ್ಯ. ಅದರಿಂದಲೇ ಪೋಷಿಸಲ್ಪಡುತ್ತದೆ ಎಂದು ಹೇಳಿದ್ದಲ್ಲದೆ ಆಚರಿಸಿ ತೋರಿಸಿದ್ದಾರೆ.

ಕುಲ, ಜಾತಿ, ಐಶ್ವರ್ಯ ಎಂಬ ಭೇದವಿಲ್ಲದೆ ಎಲ್ಲರ ಮನೆಗಳಿಗೂ ಹೋಗಿ ಅವರ ಕಿಂಕರನಂತೆ ವರ್ತಿಸಿರುವುದನ್ನ ಅವರ ಜೀವನ ಚರಿತ್ರೆಗಳು ಕೊಂಡಾಡಿವೆ. ಸರಳತೆ, ಸಚ್ಚಾರಿತ್ರ್ಯ, ಅನುಕಂಪ ರೂಢಿಸಿಕೊಳ್ಳಲು "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂದರು. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಇದೆ ಅಂತರಂಗ ಶುದ್ಧಿ, ಇದೆ ಬಹಿರಂಗ ಶುದ್ಧಿ" ಎಂದು ಅಂತರಂಗದ ಶುದ್ಧಿಗೆ ಆದ್ಯತೆ ನೀಡಿದರು, ಅಲ್ಲದೆ ವ್ಯಕ್ತಿಯು ಸಂಗ್ರಹಣೆಯಲ್ಲಿ ತೊಡಗದೆ ದಾಸೋಹದಲ್ಲಿ ತೊಡಗಬೇಕೆಂದರು.

**ಲಿಂಗಧಾರಣೆ ದೀಕ್ಷೆ:**

ಸಾವಿರಾರು ದೇವಾಲಯಗಳಿದ್ದರೂ ಅದರ ಪ್ರವೇಶಕ್ಕೆ ಇದ್ದ ನಿಷೇಧವನ್ನು ತೊಡೆಯಲು ಅಂಗೈಯಲ್ಲಿ ಲಿಂಗವಿಟ್ಟು "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದರು. ಆ ಮೂಲಕ ಕಾಲನ್ನು ಕಂಬ ಮಾಡಿ, ದೇಹವನ್ನೇ ದೇಗುಲವಾಗಿಸಿ, ಶಿರವನ್ನು ಹೊನ್ನಿನ ಕಳಸವನ್ನಾಗಿಸಿದ ಧರ್ಮ ಸುಧಾರಕ ಬಸವಣ್ಣ.

ಲಿಂಗ ದೀಕ್ಷೆಯನ್ನು ಪಡೆದವರು ಶಿವ ಸಮುದಾಯದ ಸದಸ್ಯರು ಅಥವಾ ಅವರಿಗೆ ಶಿವ ತತ್ವವನ್ನು ಪಡೆಯುವ ಸ್ವಾತಂತ್ರ್ಯವಿದೆ ಎಂದು ಕೆಳಕಸ್ತರದ ಸಮುದಾಯಗಳಿಗೆ ಲಿಂಗಧಾರಣೆ ಮಾಡಿ ಸಮಾನತೆ ಸಾರಿದರು. "ದಾಸಿ ಪುತ್ರನಾಗಲಿ ವೇಶಿ ಪುತ್ರನಾಗಲಿ, ಶಿವಾಧ್ಯಕ್ಷಯ ಬಳಿಕ ಸಾಕ್ಷಾತ್ಕಾರ ಶಿವ" ಎಂದು ಹೇಳುವ ಮೂಲಕ ಎಲ್ಲರಿಗೂ ಸಮಾನವಾದ ಮರ್ಯಾದೆ ಕೊಡಲಾಯಿತು. ಮಗು ಹುಟ್ಟಿದಾಗ ತಾಯಿ-ಬಾನಂತಿಗೆ ಹತ್ತು ದಿನಗಳ ಸೂತಕ, ಯಾರಾದರೂ ಲಿಂಗೈಕರಾದರೆ ಸೂತಕ, ಸ್ತ್ರೀಯು ದೊಡ್ಡವಳಾದರೆ ಮತ್ತು

ತಿಂಗಳಿಗೊಮ್ಮೆ ಬರುವ ಮುಟ್ಟಿನ ಸೂತಕ ಇವೆಲ್ಲವನ್ನು ಕಿತ್ತು ಹಾಕಿದರು. ಇವೆಲ್ಲವುಗಳು ನೈಸರ್ಗಿಕವಾದವುಗಳು ಎಂದು ತಿಳಿಸಿ ಲಿಂಗಧಾರಣೆ ಮಾಡಿಸಿ ಇಂತಹ ಅನಿಷ್ಟಗಳನ್ನು ಕಿತ್ತೆಸೆದರು.

**ಧಾರ್ಮಿಕ ಸಮಾನತೆ:**

ಶರಣರ ಧರ್ಮ ಮಾನವ ಧರ್ಮ. ಸಕಲ ಜೀವಿಗಳಿಗೆ ಲೇಸನ್ನೇ ಬಯಸುವುದು ಮಾನವೀಯ ಧರ್ಮ. ಅದಕ್ಕೆ "ದಯವೇ ಧರ್ಮದ ಮೂಲ" ಎಂಬುದು ಬಸವಣ್ಣನವರ ನಿಲುವು.

**ದಯವಿಲ್ಲದ ಧರ್ಮವಿದೇವುದಯ್ಯಾ.**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ.**
**ದಯವೇ ಧರ್ಮದ ಮೂಲವಯ್ಯ.**
**ಕೂಡಲಸಂಗಯ್ಯನಂತಲ್ಲ ದೊಲ್ಲನಯ್ಯ.**

ಸಕಲ ಧರ್ಮಗಳಿಗೂ ದಯವೇ ಮೂಲವಾಗಿರಬೇಕು. ದಯವಿಲ್ಲದ ಹಿಂಸೆಯನ್ನು ಬೋಧಿಸುವ ಧರ್ಮವು ಧರ್ಮವೇ ಅಲ್ಲ. ಅದು ಅಧರ್ಮದ ಪರಾಕಾಷ್ಠೆ. ಈಶನು ಸೃಷ್ಟಿಸಿದ ಈ ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯು ಸರ್ವ ಸ್ವತಂತ್ರ. ಕಾಯಕ ದುಡಿಮೆಯ ಸ್ವತಂತ್ರವಿರಬೇಕು, ದುಡಿಮೆಗೆ ತಕ್ಕ ಫಲ ದೊರೆಯಬೇಕು. ಪ್ರತಿಯೊಂದು ಜೀವಿಗಳು ಜೀವಿಸುವ ಹಕ್ಕನ್ನು ಹೊಂದಿದ್ದು, ಯಾವ ವ್ಯಕ್ತಿಯೂ ಯಾವ ಜೀವಿಯ ಜೀವಿಸುವ ಹಕ್ಕನ್ನು ಕಿತ್ತುಕೊಳ್ಳುವ ಹಾಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾರೆ. "ಕಲ್ಲ ನಾಗರ ಕಂಡರೆ ಹಾಲನೆರೆಯುವರು, ನಿಜವಾದ ನಾಗರಹಾವನ್ನು ಕಂಡರೆ ಹೊಡೆಯುವರು" ಎಂದು ಸಾಮಾನ್ಯ ಜೀವನದ ನೈಜ ವ್ಯವಸ್ಥೆಯನ್ನು ನಿಂದೆ ಮಾಡಿದ್ದಾರೆ. ಹೋಮ, ಹವನ, ಯಜ್ಞ, ಯಾಗದ ಹೆಸರಿನಲ್ಲಿ ಬಲಿಷ್ಠವಾದ ಹುಲಿಗಳನ್ನು, ಸಿಂಹಗಳನ್ನು, ಚಿರತೆ, ಕರಡಿಗಳನ್ನು ಬಲಿ ಕೊಡದೆ ಅತ್ಯಂತ ಸಾತ್ವಿಕ ಪ್ರಾಣಿಗಳಾದ ಮುಗ್ಧ ಕುರಿ ಮತ್ತು ಆಡನ್ನು ದೇವರ ಹೆಸರಿನಲ್ಲಿ ಹಿಂಸಿಸಿ ಬಲಿಕೊಡುವುದನ್ನು ಖಂಡಿಸಿದ್ದಾರೆ. ಹಸಿದು ಊಟಕ್ಕೆ ಬರುವ ಅತಿಥಿಗಳಿಗೆ ಅನ್ನ ಕೊಡದೆ 'ನಡೆಯಿರಿ' ಎಂದು, ಊಟವನ್ನೇ ಮಾಡದೇ ಇರುವ ಈಶ್ವರ ಲಿಂಗಕ್ಕೆ ಮೃಷ್ಟಾನ್ನ ಭೋಜನ ನೈವೇದ್ಯವನ್ನು ಕೊಡುವ ಸಂಪ್ರದಾಯವನ್ನು ನಿಂದಿಸಿದ್ದಾರೆ.

**ಉಪಸಂಹಾರ:**

ಬಸವಣ್ಣನವರ ವಚನಗಳು ಸಾಮಾಜಿಕ ಪರಿವರ್ತನೆಯ ಒಂದು ಸಾಧನೀಯ ಪ್ರಯೋಗ. ಜಾತಿ ವಿಷಮತೆಯ ಹಾಗೂ ಸಾಮಾಜಿಕ ಅಸಮಾನತೆ ವಿರುದ್ಧ ಅವರು ನಡೆಸಿದ ಪ್ರಯೋಗ ಹಾಗೂ ಅವರು ನಡೆಸಿದ ಸಮರ ಭಾರತದ ಸಾಮಾಜಿಕ ಬೆಳವಣಿಗೆಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲು. ಕರ್ನಾಟಕದ ಜನಸಮುದಾಯದ ಮೇಲೆ ಬಸವಣ್ಣನವರು ಅರೆ ಶತಮಾನಗಳಷ್ಟು ಹಿಂದೆ ಬೀರಿದ ಪ್ರಭಾವ ಇಂದಿಗೂ ಜೀವಂತವಾಗಿ ಉಳಿದಿದೆ. ಹನ್ನೆರಡನೇ ಶತಮಾನದ ವಚನ ಚಳುವಳಿ 21ನೇ ಶತಮಾನಕ್ಕೂ ಪ್ರಸ್ತುತ ಎನಿಸುತ್ತದೆ. ಸಮಕಾಲೀನ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳಿಗೆ ಪರಿಹಾರೋಪಾಯಗಳು ವಚನ ಸಾಹಿತ್ಯದಲ್ಲಿವೆ. ಬಸವಣ್ಣನವರು ಈ ದೆಸೆಯಲ್ಲಿ ಕ್ರಾಂತಿಕಾರಿಗಳು ಎನಿಸುತ್ತಾರೆ.

**ಪರಾಮರ್ಶನ ಗ್ರಂಥಗಳು:**

1. ಚಿದಾನಂದಮೂರ್ತಿ ಎಂ. (1967), ಬಸವಣ್ಣನವರು. ಸಪ್ನಾ ಬುಕ್ ಹೌಸ್, ಬೆಂಗಳೂರು;
2. ಬಸವರಾಜ ಕಲ್ಲಿ. (2020), ಶರಣ ಸಂಸ್ಕೃತಿ. ಬಸವ ಜ್ಯೋತಿ ಪ್ರಕಾಶನ, ಜಮಖಂಡಿ.
3. ಸಮಗ್ರ ವಚನ ಸಂಪುಟ. (2021) ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಹಳಕಟ್ಟಿ ಫ.ಗು. (2007), ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ;
5. ನಾಗೇಶ ಎಚ್.ವಿ. (2021), ಸಾಮಾಜಿಕ ಚಿಂತನೆ: ಒಂದು ಅಧ್ಯಯನ. ಭಾರತ ಪ್ರಕಾಶನ, ಧಾರವಾಡ;
6. ಕಲ್ಮಠ ಶೀಲವಂತರ. (2006), ಭಾರತೀಯ ರಾಜನೀತಿ ವಿವೇಚಕರು: ತುಲನಾತ್ಮಕ ಸರ್ಕಾರ ಮತ್ತು ರಾಜಕೀಯ. ವಿದ್ಯಾನಿಧಿ ಪ್ರಕಾಶನ, ಗದಗ;
7. ಶಂಕರ ರಾವ್. (2012), ಸಾಮಾಜಿಕ ಚಿಂತನೆಯ ಅಧ್ಯಯನ. ಜೈ ಭಾರತ್ ಪ್ರಕಾಶನ, ಮಂಗಳೂರು;
8. ಗುರುರಾಜ ಜೋಶಿ & ಮಹಾದೇವ ಜೋಶಿ, (2016), ಭಾರತದ ರಾಜನೀತಿ ವಿವಚಕರು: ತುಲನಾತ್ಮಕ ಸರ್ಕಾರ ಮತ್ತು ರಾಜಕೀಯ. ರೂಪಾ ಪ್ರಕಾಶನ, ಧಾರವಾಡ;

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.